ಪ್ರ-72-(70)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:**

ನಾಡಗೀತೆಯ ಸ್ವರ ಸಂಯೋಜನೆ ಮತ್ತು ಅವಧಿ ಕಡಿತದ ಬಗ್ಗೆ ನೇಮಕ ಮಾಡಿರುವ ಸಮಿತಿಯ ವರದಿಗಳು ಹಾಗೂ ಪತ್ರಿಕೆಗಳಲ್ಲಿ ಬರುತ್ತಿರುವ ಗೊಂದಲ ಹೇಳಿಕೆಗಳಿಂದ ಉಂಟಾಗುತ್ತಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ:**

ನಾಡಗೀತೆಯ ಸ್ವರ ಸಂಯೋಜನೆ ಮತ್ತು ಅವಧಿ ಕಡಿತದ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಕಸಂವಾ 621 ಕಸಧ 2012, ದಿನಾಂಕ:09-09-2021 ರಲ್ಲಿ ಸಾಹಿತಿಗಳು, ಸಂಗೀತ ತಜ್ಞರು, ರಾಗ ಸಂಯೋಜಕರು ಹಾಗೂ ಹಿರಿಯ ಗಾಯಕರ ಸಮಿತಿಯನ್ನು ರಚಿಸಿ, ಸರ್ಕಾರಕ್ಕೆ 15 ದಿನಗಳ ಒಳಗಾಗಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಸದರಿ ಆದೇಶದಂತೆ ದಿನಾಂಕ: 16-09-2021ರಂದು ಸಮಿತಿಯ ಸಭೆ ನಡೆಸಿ, ಸಭೆಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರುಗಳು ಚರ್ಚಿಸಿ ನೀಡಲಾದ ಅಭಿಪ್ರಾಯವನ್ನು ದಾಖಲಿಸಿದ ಸಭಾ ನಡವಳಿಯನ್ನು ಸಲ್ಲಿಸಲಾಗಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು